# ರೈತ ಸಂಪರ್ಕ ಕೇಂದ್ರಗಳು

ಘೋಷಿತ ಉದ್ದೇಶಗಳ ಈಡೇರಿಕೆಗಾಗಿ ರೈತ ಸಂಪರ್ಕ ಕೇಂದ್ರಗಳನ್ನು ಬಲಪಡಿಸಿ ನಿರ್ವಹಿಸುವುದು 2009-10ನೇ ಸಾಲಿನ ಮುಖ್ಯ ಗುರಿಯಾಗಿರುತ್ತದೆ.

1. ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕ್ರಮಗಳು, ಮಾರುಕಟ್ಟೆ ಮಾಹಿತಿ ಇವೆ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಆಧುನಿಕ ಮಾಹಿತಿ ನೀಡುವುದು.
2. ಕೃಷಿ ಪರಿಕರಗಳಾದ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮುಂತಾದವುಗಳನ್ನು ಸ್ಥಳೀಯವಾಗಿ ಒದಗಿಸಲು ಸಂಯೋಜನೆ ಮಾಡುವುದು.
3. ಬೀಜ ಮೊಳಕೆ ಮತ್ತು ಗುಣಮಟ್ಟ ಪರೀಕ್ಷೆ, ಮಣ್ಣು ಪರೀಕ್ಷೆ ಇತ್ಯಾದಿ ಮೂಲ ಪರೀಕ್ಷಾ ಸೌಲಭ್ಯಗಳನ್ನು ಸಳೀಯವಾಗಿ ಒದಗಿಸುವುದು.
4. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ ಬೀಜಗಳು ಮತ್ತು ಇತರ ಪರಿಕರಗಳ(ತಾಂತ್ರಿಕತೆಗಳು) ಪ್ರಾತ್ಯಕ್ಷಿಕೆಗೆ ಸೌಲಭ್ಯ ಒದಗಿಸುವುದು.
5. ಸಾರ್ವಜನಿಕ ಮತ್ತು ಖಾಸಗಿ ರಂಗಗಳ ತಂತ್ರಜ್ಞಾನ ಮತ್ತು ಪರಿಕರಗಳ ತುಲನೆ/ಪರಿಶೀಲನೆಗೆ ಅವಕಾಶ ಒದಗಿಸುವುದು.

ಎಲ್ಲಾ ವಿಸ್ತರಣಾ ಕಾರ್ಯಕರ್ತರು ಹಾಗೂ ಅಧಿಕಾರಿಗಳು ಅವರುಗಳಿಗೆ ನಿಗಧಿಪಡಿಸಲಾದ ಕೇಂದ್ರಸ್ಥಾನದಲ್ಲಿ ಖಡ್ಡಾಯವಾಗಿ ವಾಸವಾಗಿರತಕ್ಕದ್ದು.

ರೈತ ಸಂಪರ್ಕ ಕೇಂದ್ರಗಳು ಎಲ್ಲಾ ಕಛೇರಿ ದಿವಸಗಳಂದು ಕಛೇರಿ ವೇಳೆಯಲ್ಲಿ (ಬೆಳಿಗ್ಗೆ 10.00 ಘಂಟೆಯಿಂದ ಸಂಜೆ 5.30 ಘಂಟೆವರೆಗೆ) ಕಾರ್ಯ ನಿರ್ವಹಿಸತಕ್ಕದ್ದು.

ಕಛೇರಿ ವೇಳೆಯಲ್ಲಿ ಯಾವುದೇ ಕಾರಣಕ್ಕೂ ರೈತ ಸಂಪರ್ಕ ಕೇಂದ್ರಗಳ ಬಾಗಿಲು ಮುಚ್ಚಿರಕೂಡದು. ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರದಲ್ಲಿ ಕಛೇರಿ ವೇಳೆಯಲ್ಲಿ ಸದಾ ಹಾಜರಿದ್ದು ಭೇಟಿ ನೀಡುವ ರೈತರಿಗೆ ಅವಶ್ಯಕ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು ಹಾಗೂ ಕೇಂದ್ರದಲ್ಲಿ ಸುವ್ಯವಸ್ಥೆ ಕಾಪಾಡಿಕೊಳ್ಳಬೇಕು.

ಕೃಷಿ ಅಧಿಕಾರಿ ಇಲ್ಲದ ಪಕ್ಷದಲ್ಲಿ ಒಬ್ಬ ಸಹಾಯಕ ಕೃಷಿ ಅಧಿಕಾರಿ ಅಥವಾ ಕನಿಷ್ಟ ಪಕ್ಷ ಒಬ್ಬ ಕೃಷಿ ಸಹಾಯಕರಾದರೂ ಕೇಂದ್ರದಲ್ಲಿ ಇದ್ದುಕೊಂಡು ಕಾರ್ಯ ನಿರ್ವಹಿಸಬೇಕು.

**ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು**

೧. ಕೇಂದ್ರವಾರು ನಿಯೋಜಿಸಲಾದ ಕೃಷಿ ಸಹಾಯಕರ ಪೈಕಿ ಒಬ್ಬರನ್ನು ಕೇಂದ್ರದ ದಿನನಿತ್ಯದ ಮೇಲ್ವಿಚಾರಣೆಗೆ ಖಾಯಂ ಆಗಿ ನಿಯೋಜಿಸಬೇಕು.

೨. ಹಾಗೂ ಇನ್ನುಳಿದ ಕೃಷಿ ಸಹಾಯಕರಿಗೆ ಗ್ರಾಮ ಪಂಚಾಯಿತಿಯನ್ನು ಘಟಕವಾಗಿರಿಸಿಕೊಂಡು ಕಾರ್ಯವ್ಯಾಪ್ತಿ ಹಾಗೂ ಕೇಂದ್ರ ಸ್ಥಾನ ನಿಗದಿಪಡಿಸಬೇಕು.

೩. ಹೀಗೆ ನಿಗದಿಪಡಿಸಲಾದ ಕಾರ್ಯ ವ್ಯಾಪ್ತಿಯಲ್ಲಿ ವಸತಿ ಗೃಹವಿದ್ದಲ್ಲಿ ವಸತಿ ಗೃಹವಿರುವ ಪಂಚಾಯಿತಿಯನ್ನು ಕೇಂದ್ರ ಸ್ಥಾನವನ್ನಾಗಿ ನಿಗದಿಪಡಿಸಬೇಕು.

೪. ಯಾವುದೇ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಿಗಿಂತ ಹೆಚ್ಚು ಸಹಾಯಕ ಕೃಷಿ ಅಧಿಕಾರಿಗಳಿದ್ದಲ್ಲಿ ಕೃಷಿ ಸಹಾಯಕರ ಕಾರ್ಯ ವ್ಯಾಪ್ತಿಯನ್ನು ಘಟಕವಾಗಿರಿಸಿಕೊಂಡು ಸಹಾಯಕ ಕೃಷಿ ಅಧಿಕಾರಿ ಕಾರ್ಯವ್ಯಾಪ್ತಿ ಹಾಗೂ ಕೇಂದ್ರ ಸ್ಥಾನ ನಿಗದಿಪಡಿಸಬೇಕು.

೫. ಸಹಾಯಕ ಕೃಷಿ ನಿರ್ದೇಶಕರು ಸೇರಿದಂತೆ ಎಲ್ಲಾ ವಿಸ್ತರಣಾ ಅಧಿಕಾರಿ/ಕಾರ್ಯಕರ್ತರು ನಿಗದಿತ ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿ ವಾಸವಾಗಿರುವಂತೆ ಕ್ರಮ ವಹಿಸಬೇಕು.

೬. ಕೇಂದ್ರ ಸ್ಥಾನದಲ್ಲಿ ವಾಸವಿರದ ಅಧಿಕಾರಿ/ಕಾರ್ಯಕರ್ತರನ್ನು ನಿಯಮಾನುಸಾರ ಶಿಸ್ತಿನ ಕ್ರಮಕ್ಕೊಳಪಡಿಸಿ ದಿನಾಂಕ 31-5-2009 ರ ಒಳಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರಿಗೆ ವರದಿ ಕಳುಹಿಸಬೇಕು. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ದಿನಾಂಕ 15-6-2009 ರ ಒಳಗಾಗಿ ಜಿಲ್ಲಾ ಮಟ್ಟದ ಕ್ರೋಢೀಕೃತ ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.

೭. ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಸಹಾಯಕರ ಸೇವೆಯನ್ನು ಎರಡು ಇಲಾಖೆಗಳಲ್ಲಿ ಜಂಟಿಯಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಹೊರಡಿಸಲಾದ ಕರ್ನಾಟಕ ಸರ್ಕಾರ ಜಂಟಿ ಸುತ್ತೋಲೆ (ಕೃಷಿ ಇಲಾಖೆ) ಸಂ.ಕೃಇಸಿಃಎಎಃಎಇಪಿ(1)(2):2003-04 ಹಾಗೂ (ಜಲಾನಯನ ಅಭಿವೃದ್ಧಿ ಇಲಾಖೆ) ಸಂ.ಆಡಳಿತಃವಿನಿ-3ಃವಿವ-34ಃ04 ದಿನಾಂಕ 9-2-04 ರ ಅನ್ವಯ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಹಾಗೂ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಕ್ರಮ ವಹಿಸಿ ಕೃಷಿ ಸಹಾಯಕರ ಸೇವೆಯ ಕೊರತೆಯನ್ನು ಪೂರೈಸಿಕೊಳ್ಳಬೇಕು.

ಕೇಂದ್ರಕ್ಕೆ ಭೇಟಿ ನೀಡುವ ರೈತರ ವಿವರಗಳನ್ನು ರೈತ ಸಂಪರ್ಕ ಸ್ಪಂದನ ವಹಿಯಲ್ಲಿ ದಾಖಲಿಸಿ ರೈತರಿಗೆ ಮಾಹಿತಿ ನೀಡಬೇಕು. ವಹಿಯ ಕಾಲಂ ಗಳು ಈ ಕೆಳಗಿನಂತಿರಬೇಕು.

| ಕ್ರ.ಸಂ | ರೈತರ ಹೆಸರು/ವಿಳಾಸ | ಸಮಸ್ಯೆ | ಸಲಹೆ | ರೈತರ ರುಜು |
|---|---|---|---|---|
| ೧ | | | | |
| ೨ | | | | |

ಸದರಿ ವಹಿಯಲ್ಲಿ ಪ್ರತಿ ದಿವಸದ ಪ್ರಾರಂಭದಲ್ಲಿ ಆ ದಿನಾಂಕವನ್ನು ಕೆಂಪು ಶಾಯಿಯಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. ರೈತರಿಗೆ ಸಲಹೆಗಳನ್ನು ಸಲಹಾ ಚೀಟಿಯಲ್ಲಿ ಸ್ಪಷ್ಟವಾಗಿ ಈ ಮೇಲಿನ ವಹಿಯಲ್ಲಿ ನಮೂದಿಸಿದಂತೆಯೇ ಬರೆದುಕೊಡತಕ್ಕದ್ದು. ಸಲಹಾ ಚೀಟಿಯ ನಮೂನೆಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಕ್ರಮ ಸಂಖ್ಯೆಯನ್ನು ಪ್ರತಿ ಮಾಹೆಗೆ ಒಂದು ಸಲ ಬದಲಿಸಬೇಕು.

ಮುದ್ರಿತ ಸಲಹಾ ಚೀಟಿಗಳು ಬೇಕಾಗಿದ್ದಲ್ಲಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಜಂಟಿ ಕೃಷಿ ನಿರ್ದೇಶಕರು(ವಿಸ್ತರಣೆ ಮತ್ತು ತರಬೇತಿ) ಕೇಂದ್ರ ಕಛೇರಿ ಬೆಂಗಳೂರು ಇವರಿಗೆ ದಿನಾಂಕ 31-5-2009 ರ ಒಳಗಾಗಿ ಬೇಡಿಕೆ ಕಳುಹಿಸಬೇಕು.

ಸಂತೆಯ ದಿವಸಗಳಂದು ಎಲ್ಲಾ ಸಹಾಯಕ ಕೃಷಿ ಅಧಿಕಾರಿಗಳು/ಕೃಷಿ ಸಹಾಯಕರು ಹಾಗೂ ತೋಟಗಾರಿಕೆ, ಪಶು ವೈದ್ಯಕೀಯ, ರೇಷ್ಮೆ, ಮೀನುಗಾರಿಕೆ ಇವೇ ಮುಂತಾದ ಕೃಷಿ ಸಂಬಂಧಿತ ಇಲಾಖೆಗಳ ತಾಂತ್ರಿಕ ಸಿಬ್ಬಂದಿಯವರು (ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಂಯೋಜನೆಯೊಂದಿಗೆ ಏರ್ಪಾಡು ಮಾಡಬೇಕು) ಕೇಂದ್ರದಲ್ಲಿ ಹಾಜರಿದ್ದು ರೈತರಿಗೆ ಮಾಹಿತಿ ನೀಡಬೇಕು.

ಕೃಷಿ ಸಹಾಯಕರು ಮತ್ತು ಸಹಾಯಕ ಕೃಷಿ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯ ರೈತರ ಮತ್ತು ಗ್ರಾಮಗಳ ಸಂಖ್ಯೆಯನ್ನಾಧಾರಿಸಿ ನಿಯತವಾಗಿ ಗುಂಪುವಾರು ಭೇಟಿ ಕಾರ್ಯಕ್ರಮದನ್ವಯ ಕ್ಷೇತ್ರ ಭೇಟಿ, ವಿಸ್ತರಣಾ ಕಾರ್ಯ ಹಾಗೂ

ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಪಾಕ್ಷಿಕ ತರಬೇತಿಯ ಕಾಲಕ್ಕೆ ಸಜೀವ ಮಾದರಿಗಳೊಂದಿಗೆ ಹಿಂಪೋಷಣಾ ಮಾಹಿತಿಯನ್ನು ನೀಡುವುದಲ್ಲದೆ ಪಡೆದ ಪರಿಹಾರಗಳನ್ನು ರೈತರಿಗೆ ನೀಡಬೇಕು.

ಕೇಂದ್ರಗಳಲ್ಲಿ ಮಾಹಿತಿ ವಿಸ್ತರಣೆ ಹಾಗೂ ಪ್ರದರ್ಶನದೊಂದಿಗೆ ಅಚ್ಚುಕಟ್ಟುತನ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕೇಂದ್ರದಲ್ಲಿ ಸ್ವಚ್ಛತೆ ಮತ್ತು ನೀರಿನ ವ್ಯವಸ್ಥೆ, ನೀರಿನ ಶುಲ್ಕ, ವಿದ್ಯುತ್ ಶುಲ್ಕ, ಸಣ್ಣ ದುರಸ್ತಿ (ಇಲಾಖೆಯ ಕಟ್ಟಡಗಳಲ್ಲಿ ಮಾತ್ರ) ಸರ್ವೀಸ್ ಸ್ಟಾಂಪ್, ದೂರವಾಣಿ ವೆಚ್ಚ ತಂತಿ ವೆಚ್ಚ, ವಿಸ್ತರಣಾ ಸಾಹಿತ್ಯ ಮುದ್ರಣ, ಜನಪ್ರಿಯ ಕನ್ನಡ ದಿನಪತ್ರಿಕೆ, ಕೃಷಿ ಪರಿಕರ(ಮಾದರಿ ಪ್ರದರ್ಶನಕ್ಕಾಗಿ) ಸಂದೇಶಗಳನ್ನು ಬರೆಯಲು ಪೆನ್ನು, ಬಳಪ, ಲೇಖನ ಸಾಮಗ್ರಿ, ಪ್ರದರ್ಶನ ಸಾಮಗ್ರಿ, ಕೌಶಲ್ಯ ಭೋಧನಾ ಸಾಮಗ್ರಿ ಹಾಗೂ ಇತರೆ ವೆಚ್ಚಗಳಿಗಾಗಿ ಜಿಲ್ಲಾವಲಯದಲ್ಲಿ ಸಸ್ಯಚಿಕಿತ್ಸಾಲಯಗಳು ಕಾರ್ಯಕ್ರಮದಡಿಯಲ್ಲಿ ಒದಗಿಸಿದ ಅನುದಾನವನ್ನು ಉಪಯೋಗಿಸಬಹುದಾಗಿದೆ.

ಕೃಷಿ ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಗೆ ವಿಶೇಷ ಆರ್ಥಿಕ ಅಧಿಕಾರ ನೀಡುವ ಬಗ್ಗೆ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆಃಕೃತೋಇ/130/ಕೃಪಎ/98 ದಿನಾಂಕ 21-4-2001 ರ ಕ್ರ.ಸಂ.18 ರಲ್ಲಿ To sanction expenditure on holding farmers week, farmers days, field days on farms and institutions ಬಾಬ್ತು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಅನುದಾನ ಲಭ್ಯತೆಯ ಮಿತಿಗೊಳಪಟ್ಟಂತೆ ವೆಚ್ಚ ಭರಿಸಲು ಪೂರ್ಣ ಅಧಿಕಾರ ನೀಡಲಾಗಿದೆ. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಈ ಅಧಿಕಾರವನ್ನು ಸಂಬಂಧಪಟ್ಟ ನಿಯಮಾನುಸಾರ ಚಲಾಯಿಸಿ ವಿವಿಧ ಶೀರ್ಷಿಕೆಗಳಡಿಯಲ್ಲಿ ಒದಗಿಸಲಾದ ಅನುದಾನವನ್ನು ಬಳಸಿ ರೈತ ಸಂಪರ್ಕ ಕೇಂದ್ರಗಳನ್ನು ರೈತರ ಸಪ್ತಾಹ, ರೈತರ ದಿನ ಹಾಗೂ ಕ್ಷೇತ್ರೋತ್ಸವಗಳನ್ನು ಏರ್ಪಡಿಸಲು ಸಜ್ಜುಗೊಳಿಸಬಹುದಾಗಿದೆ.

ಕೇಂದ್ರದಲ್ಲಿ ಈ ಕೆಳಕಾಣಿಸಿದ ಮಾಹಿತಿ ಒದಗಿಸುವ ದಾಖಲೆ/ಪಟಗಳನ್ನು ಹಾಗೂ ಇಲಾಕೆಯ ವಿವಿದ ಸುತ್ತೋಲೆಗಳಲ್ಲಿ ತಿಳಿಸಿರುವ ಪ್ರಕಾರ ದಾಖಲೆ/ವಹಿಗಳನ್ನು ವ್ಯವಸ್ಥಿತವಾಗಿ ಇರಿಸಿ ಪ್ರದರ್ಶಿಸತಕ್ಕದ್ದು.

೧. ಜಿಲ್ಲೆ ತಾಲ್ಲೂಕು ಹಾಗೂ ಹೋಬಳಿ ನಕಾಶೆ
೨. ಹೋಬಳಿಯ ಸಾಮಾನ್ಯ ಮಾಹಿತಿ
೩. ರೈತ ಸಂಪರ್ಕ ಸ್ಪಂದನ ವಹಿ
೪. ಹಾಜರಿ ಪುಸ್ತಕ
೫. ಮೇಲಾಧಿಕಾರಿಗಳ ಭೇಟಿ ಪುಸ್ತಕ
೬. ರೈತ ಸಂಪರ್ಕ ಕೇಂದ್ರದ ಸಿಬ್ಬಂದಿಯ ಹೆಸರುಗಳ ಪಟ್ಟಿ
೭. ಚಲನವಲನ ಪುಸ್ತಕ
೮. ರೈತ ಸಂಪರ್ಕ ಕೇಂದ್ರಗಳ ಸಿಬ್ಬಂದಿಯ ಕಾರ್ಯವ್ಯಾಪ್ತಿ/ಕೇಂದ್ರ ಸ್ಥಾನ ಗುರುತಿಸುವ ನಕಾಶೆ.
೯. ಹೋಬಳಿಯ ಗ್ರಾಮವಾರು ಹಿಡುವಳಿಗಳ ಪಟ್ಟಿ.
೧೦. ಹೋಬಳಿಯ ಗ್ರಾಮವಾರು ಬೆಳೆವಾರು ಸಾಮಾನ್ಯ ಕ್ಷೇತ್ರ ಆವರಣ ವಿವರ ಹಾಗೂ ಮಳೆ ವಿವರ.
೧೧. ಹೋಬಳಿಯ ಗ್ರಾಮವಾರು ಬೆಳೆವಾರು ಕ್ಷೇತ್ರ ಆವರಣ ವಿವರ (ಹಿಂದಿನ 10 ವರ್ಷಗಳ ವಿವರ)
೧೨. ಬೆಳೆವಾರು ತಳಿವಾರು ಬೀಜ, ರಸಗೊಬ್ಬರ, ಕೀಟನಾಶಕ, ಬೀಜೋಪಚಾರ ಔಷಧಿಗಳು, ಶಿಲೀಂದ್ರ ನಾಶಕ, ಕಳೆನಾಶಕ, ಆಂಟಿಬಯೋಟಿಕ್ಸ್, ಸಾವಯವ ಕೀಟನಾಶಕಗಳು ಐ.ಪಿ.ಎಂ ಸಾಮಗ್ರಿಗಳು ಬೆಳೆ ಸಮಸ್ಯೆ ಕುರಿತು ಸಜೀವ ಮಾದರಿಗಳು ತಾಂತ್ರಿಕತೆಗಳ ಬಗ್ಗೆ ಸಮಗ್ರ ವಿವರಗಳನ್ನೊಳಗೊಂಡ ಮಾಹಿತಿ (ಕೆಂಪು ತಲೆ ಕಂಬಳಿಹುಳು ನಿಯಂತ್ರಣ, ಗೊಣ್ಣೆ ಹುಳು ನಿಯಂತ್ರಣ ಇತ್ಯಾದಿ) ಇವೇ ಮುಂತಾದವುಗಳ ಮಾದರಿಗಳು

೧೩. ಇಲಾಖಾವಾರು ಭಿತ್ತಿ ಪತ್ರಗಳ ವ್ಯವಸ್ಥಿತ ಪ್ರದರ್ಶನ (ಸಾಗುವಳಿ ಕ್ರಮ, ಸಾವಯವ ಕೃಷಿ, ಬೀಜ. ರಸಗೊಬ್ಬರ ಸಮಗ್ರ ಪೀಡೆ ನಿರ್ವಹಣೆ ಇವೇ ಮುಂತಾದ ವಿಷಯಗಳಿಗೆ ಸಂಬಂಧಸಿದ ಭಿತ್ತಿ ಪತ್ರಗಳು ಹಾಗೂ ಇಲಾಖೆಯ ಪ್ರಕಟಣೆಗಳು, ಉದಾಃ ವ್ಯವಸಾಯ ರಂಗ ಇತ್ಯಾದಿ)

೧೪. ವಿವಿಧ ಬೆಳೆ ಉತ್ಪಾದನೆ ತಾಂತ್ರಿಕತೆಗಳ ಹಸ್ತಪ್ರತಿಗಳು.

೧೫. ಬೀಜ ಮೊಳಕೆ ಪರೀಕ್ಷಾ ಸಲಕರಣೆಗಳು ಹಾಗೂ ಸಂಬಂಧಿಸಿದ ವಹಿ.

೧೬. ರಸಗೊಬ್ಬರ ಹಾಗೂ ಕೀಟನಾಶಕ ಮಾದರಿ ವಿಶ್ಲೇಷಣೆಗೆ ಸಂಬಂಧಿಸಿದ ಸಲಕರಣೆಗಳು ಹಾಗೂ ವಹಿಗಳು.

೧೭. ಕೃಷಿ ಪರಿಕರ ಮಾರಾಟ (ಸರ್ಕಾರಿ ಹಾಗೂ ಖಾಸಗಿ) ಮಳಿಗೆಗಳ ಪಟ್ಟಿ (ಲೈಸೆನ್ಸ್ ವಿವರಗಳೊಂದಿಗೆ)

೧೮. ರೈತ ಸಂಪರ್ಕ ಕೇಂದ್ರದಲ್ಲಿರುವ ಫಲಕದ ಮೇಲೆ ಚಾಲ್ತಿ ಪಾಕ್ಷಿಕದ ಮಹತ್ವದ ಸಂದೇಶಗಳನ್ನು ಮತ್ತು ನಿನ್ನೆಯ ಪೇಟೆ ಧಾರಣೆಗಳು ಶೀರ್ಷಿಕೆ ಅಡಿಯಲ್ಲಿ ಪ್ರಮುಖ ಕೃಷಿ ಉತ್ಪನ್ನಗಳ ಬೆಲೆಗಳನ್ನು ದೈನಿಕ ಪತ್ರಿಕೆಗಳಿಂದ ಪಡೆದು ಬರೆಯತಕ್ಕದ್ದು. (ನಮೂನೆ ಅನುಬಂಧ-2 ರಲ್ಲಿರುವಂತೆ)

ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಕ್ರಮವಾಗಿ ಮಾಹೆ ಮತ್ತು ದ್ವೈಮಾಸಿಕದಲ್ಲಿ ಕನಿಷ್ಟ ಒಂದು ಬಾರಿ ಕೇಂದ್ರವನ್ನು ಸಂದರ್ಶಿಸಿ ನ್ಯೂನತೆಗಳನ್ನು ಸರಿಪಡಿಸಲು ಸಂದರ್ಶನ ವಹಿಯಲ್ಲಿ ಸ್ಪಷ್ಟ ಮಾರ್ಗದರ್ಶನ ನೀಡತಕ್ಕದ್ದು.

ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಕೆಲವೊಂದು ವಹಿಗಳನ್ನು ನಿರ್ವಹಿಸಬೇಕಾಗಿದ್ದು ವಿವರಗಳನ್ನು ಅನುಬಂಧ-3ರಲ್ಲಿ ನೀಡಿದೆ.

ರೈತ ಸಂಪರ್ಕ ಕೇಂದ್ರದ ಅಧೀನದಲ್ಲಿರುವ ಕೃಷಿ ಸಹಾಯಕರು ನಿರ್ವಹಿಸಬೇಕಾದ ವಹಿಗಳ ಪಟ್ಟಿಯನ್ನು ಅನುಬಂಧ-4 ರಲ್ಲಿ ನೀಡಿದೆ.

**ರೈತ ಸಂಪರ್ಕ ಕೇಂದ್ರಗಳ ಪ್ರಗತಿಯ ವಿವರಗಳನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರು ಪ್ರತಿ ತಿಂಗಳು ದಿನಾಂಕ 10 ರೊಳಗಾಗಿ ಕೇಂದ್ರ ಕಛೇರಿಗೆ ಕಳುಹಿಸಬೇಕು.** ಎಲ್ಲಾ ರೈತ ಸಂಪರ್ಕ ಕೇಂದ್ರಗಳಿಂದ ಪ್ರಗತಿಯ ವಿವರಗಳನ್ನು ಪಡೆದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ದಿನಾಂಕ 5 ರೊಳಗಾಗಿ ಪ್ರತಿ ತಿಂಗಳೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರಿಗೆ ತಲುಪಿಸತಕ್ಕದ್ದು. ಪ್ರಗತಿ ಪತ್ರಿಕೆಯ ನಮೂನೆಯನ್ನು ಅನುಬಂಧ-5 ರಲ್ಲಿ ನೀಡಿದೆ.

## ಅನುಬಂಧ-1

<table>
<tr>
<td>ಕರ್ನಾಟಕ ಸರ್ಕಾರ<br>ರೈತ ಸಂಪರ್ಕ ಕೇಂದ್ರ<br>ಕೃಷಿ ಸಲಹಾ ಚೀಟಿ<br>ಕ್ರ.ಸಂ. ದಿಃ<br>ರೈತರ ವಿಳಾಸಃ<br>ಶ್ರೀ/ಶ್ರೀಮತಿ-----------------------------<br>ಗ್ರಾಮ------------------------------<br>ಗ್ರಾ.ಪಂ.-----------------------------</td>
<td colspan="2">............ ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಕೃಷಿ ಇಲಾಖೆ<br>ಜಿಲ್ಲ ಪಂಚಾಯತ್ ರೈತ ಸಂಪರ್ಕ ಕೇಂದ್ರ ------------- ತಾಲ್ಲೂಕು<br>ಕೃಷಿ ಸಲಹಾ ಚೀಟಿ<br>ಕ್ರ.ಸಂ ದಿನಾಂಕ<br>ರೈತರ ವಿಳಾಸ<br>ಶ್ರೀ/ಶ್ರೀಮತಿ<br>ಗ್ರಾಮ-------------------------------------<br>ಗ್ರಾ.ಪಂ.-----------------------------------</td>
</tr>
<tr>
<td rowspan="2">ಸಲಹೆಗಳು (ಸಂಕ್ಷಿಪ್ತವಾಗಿ)<br><br>ರೈತರ ರುಜು ಕೃಷಿ ಅಧಿಕಾರಿ</td>
<td>ಅ.ಸಂ</td>
<td>ಸಲಹೆಗಳು</td>
</tr>
<tr>
<td></td>
<td><br><br>ಕೃಷಿ ಅಧಿಕಾರಿ</td>
</tr>
</table>

## ಅನುಬಂಧ-2

ಮಹತ್ವದ ಸಂದೇಶಗಳು

ಚಾಲ್ತಿ ಪಕ್ಷ------------------------------------- ರಿಂದ-------------------------------------------- ------- ರವರೆಗೆ

| ಅ.ಸಂ | ಬೆಳೆ | ಸಂದೇಶ |
|---|---|---|
| 1 | | |
| 2 | | |

ಚಾಲ್ತಿಯಲ್ಲಿರುವ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಸಾಮಾನ್ಯ ಸಂದೇಶಗಳು

1. ------------------------------------------------------------------------
2. ------------------------------------------------------------------------
3. ------------------------------------------------------------------------

ನಿನ್ನೆಯ ಪೇಟೆ ಧಾರಣೆಗಳು --------------------------- ಮಾರುಕಟ್ಟೆ

| ಅ.ಸಂ | ಸರಕು | ದರ ರೂ. ಕ್ವಿಂಟಾಲ್ ಗೆ |
|---|---|---|
| 1 | | |
| 2 | | |

## ಅನುಬಂಧ-3

**ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ನಿರ್ವಹಿಸತಕ್ಕ ವಹಿಗಳು**

ಅ. ದಿನಚರಿ

ಆ. ದಾಸ್ತಾನು ವಹಿ(ಜಡವಸ್ತು) (ಕೃಷಿ ಸಹಾಯಕ (ಕೇಂದ್ರ )ಇವರಲ್ಲಿರಬೇಕು)

ಇ. ದಾಸ್ತಾನು ವಹಿ(ತಾಂತ್ರಿಕ)

ಈ. ಮಣ್ಣು ಪರೀಕ್ಷೆ ಅನುಸರಣೆ

ಉ. ಪ್ರಾತ್ಯಕ್ಷಿಕೆ (ಕಿರುಚೀಲ ಪ್ರಾತ್ಯಕ್ಷಿಕೆ ಸಹಿತ

ಊ. ಬೆಳೆ ಕಟಾವು ಪ್ರಯೋಗಗಳ ವಿವರಗಳು

ಋ. ಇಲಾಖಾ ಕಾರ್ಯಕ್ರಮಗಳ ಮಾರ್ಗಸೂಚಿಗಳು

ೠ. ಪಾಕ್ಷಿಕ ತರಬೇತಿ ನಡವಳಿಗಳು

ಎ. ಕೃಷಿ ಸಹಾಯಕರ ಕಾರ್ಯ ಪರಿಶೀಲನೆ ಬಗ್ಗೆ ವರದಿ

ಏ. ಹಾಜರಾತಿ ಮಾಹಿತಿ ಕಡತ.

ಐ. ಮೇಲಾಧಿಕಾರಿಗಳಿಂದ ಬಂದ ಪತ್ರಗಳು ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಕಡತ

ಒ. ವಿಶಿಷ್ಟ ಸಾಧನೆಗಳು

ಓ. ಗ್ರಾಮ ಪಂಚಾಯತಿವಾರು ಬೆಳೆ ಉತ್ಪಾದನಾ ಕಾರ್ಯಕ್ರಮ

ಔ. ರಿಯಾಯಿತಿ ಸೌಲಭ್ಯ ವಿತರಣಾ ವಹಿ

ಅಂ. ನೀರಾವರಿ ಮೂಲವಾರು ಬೆಳೆ ಯೋಜನೆ ಮತ್ತು ಪ್ರಗತಿ.

ಅಃ. ನಗದು ಪುಸ್ತಕ-ಒಂದು ಮಾತ್ರ (ದೈನಂದಿನ ಆಧಾರದಲ್ಲಿ ಬ್ಯಾಂಕ್ಗೆ ಹಣ ಜಮಾ ಕಾರ್ಯಕ್ಕೆ  ಹೊಂದಾಣಿಕೆ ಇರಬೇಕು)

ಕ. ಎರಡು ಪ್ರತ್ಯೇಕ (ಸೇವಾ ಶುಲ್ಕ ಮತ್ತು ಮಾರಾಟ ಬಾಬ್ತು ಕುರಿತು )ಬ್ಯಾಂಕ್ ಖಾತೆಗಳ ಲೆಕ್ಕ ಪುಸ್ತಕಗಳು (ಬ್ಯಾಂಕುಗಳು ನೀಡಿದ್ದು ಮಾತ್ರ)

## ಅನುಬಂಧ-4

**ರೈತ ಸಂಪರ್ಕ ಕೇಂದ್ರದ ಅಧೀನದಲ್ಲಿರುವ ಕೃಷಿ ಸಹಾಯಕರು ನಿರ್ವಹಿಸತಕ್ಕ ವಹಿಗಳು**

ಅ.ದಿನಚರಿ

ಆ.ದಾಸ್ತಾನು ವಹಿ

ಇ.ಮೊಳಕೆ ಪರೀಕ್ಷೆ ವಹಿ

ಈ.ಮಣ್ಣು ಪರೀಕ್ಷೆ ವಹಿ

ಉ.ಬೆಳೆ ಕಟಾವು ಪ್ರಯೋಗಗಳ ವಿವರಗಳು

ಊ.ಪ್ರಾತ್ಯಕ್ಷಿಕೆ  ವಹಿ

ಋ.ಬೆಳೆ ಕ್ಷೇತ್ರ (ಬೆಳೆ ಪತ್ರಿಕೆ ವಹಿ)

ೠ.ವಿಶಿಷ್ಠ ಸಾಧನೆಗಳು

ಎ.ಬೆಳೆ ಉತ್ಪಾದನಾ ಯೋಜನೆ

ಏ.ನೀರಾವರಿ ಮೂಲವಾರು ಬೆಳೆ ಯೋಜನೆ ಹಾಗೂ ಪ್ರಗತಿ.

# ಅನುಬಂಧ-5

## ರೈತ ಸಂಪರ್ಕ ಕೇಂದ್ರಗಳ ಚಟುವಟಿಕೆಗಳ ಪ್ರಗತಿಯ ವರದಿ

## 2009-10ನೇ ಸಾಲಿನ ---- ಮಾಹೆಯ ಅಂತ್ಯದ ವರದಿ

## (ದಿನಾಂಕ 1-4-2006 ರಿಂದ -----ಮಾಹೆಯ ಅಂತ್ಯದವರೆಗಿನ ಸಂಚಿತ ಪ್ರಗತಿ)

ಜಿಲ್ಲೆ ಃ

| ಕ್ರ. ಸಂ. | ತಾಲ್ಲೂಕು | ಸಂದರ್ಶಿಸಿದ ರೈತರ ಸಂಖ್ಯೆ | ಸಲಹೆ ಪಡೆದ ರೈತರ ಸಂಖ್ಯೆ | ಬೀಜ ಪಡೆದ ರೈತರ ಸಂಖ್ಯೆ | ಸಸ್ಯ ಸಂರಕ್ಷಣೆ ಔಷಧಿ ಪಡೆದ ರೈತರ ಸಂಖ್ಯೆ | ಕೃಷಿ ಉಪಕರಣ ಪಡೆದ ರೈತರ ಸಂಖ್ಯೆ | ಸಸ್ಯ ಸಂರಕ್ಷಣಾ ಉಪಕರಣ ಪಡೆದ ರೈತರ ಸಂಖ್ಯೆ | ಇತರೆ ಉದ್ದೇಶಗಳಿಗಾಗಿ ಭೇಟಿ ನೀಡಿದ ರೈತರ ಸಂಖ್ಯೆ. |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |
| ಒಟ್ಟು | | | | | | | | |

| ಸೇವಾ ಶುಲ್ಕ ಸಂಗ್ರಹಣೆ | | | | | | | ಒಟ್ಟು ಸಂಗ್ರಹಿಸಲಾದ ಸೇವಾ ಶುಲ್ಕ ರೂ.ಗಳಲ್ಲಿ | ಷರಾ |
|---|---|---|---|---|---|---|---|---|
| ಮಣ್ಣು ಮಾದರಿ ಪರೀಕ್ಷೆ | | ಬೀಜ ಪರೀಕ್ಷೆ | | ಬೀಜ ಮಾರಾಟ | | ಇತರೆ ಬಾಬ್ತು | | |
| ಮಣ್ಣು ಮಾದರಿ ಸಂಖ್ಯೆ | ಸೇವಾ ಶುಲ್ಕ ರೂ.ಗಳಲ್ಲಿ | ಮಾದರಿಗಳ ಸಂಖ್ಯೆ | ಸೇವಾ ಶುಲ್ಕ ರೂ.ಗಳಲ್ಲಿ | ಪ್ರಮಾಣ ಕ್ವಿಂ.ಗಳಲ್ಲಿ | ಸೇವಾ ಶುಲ್ಕ ರೂ.ಗಳಲ್ಲಿ | ಸೇವಾ ಶುಲ್ಕ ರೂ.ಗಳಲ್ಲಿ | | |
| 10 | 11 | 12 | 13 | 14 | 15 | 16 | 17 | 18 |
| | | | | | | | | |
| | | | | | | | | |

ಜಂಟಿ ಕೃಷಿ ನಿರ್ದೇಶಕರು.

# ಸಸ್ಯ ಚಿಕಿತ್ಸಾಲಯಗಳು (ಯೋಜನೆ)(ಜಿಲ್ಲಾ ವಲಯ)

## (2401-00-109-0-21)

ಆಧುನಿಕ ಕೃಷಿ ತಂತ್ರಜ್ಞಾನ ಅಳವಡಿಸಲು ಮುಂದಾಗುತ್ತಿರುವ ರೈತರ ಹೆಚ್ಚುತ್ತಿರುವ ವಿಸ್ತರಣಾ ಬೇಡಿಕೆಗಳನ್ನು ಪೂರೈಸಲು ಕಂದಾಯ ಹೋಬಳಿಗೊಂದರಂತೆ ಒಟ್ಟು 745 ರೈತ ಸಂಪರ್ಕ ಕೇಂದ್ರಗಳನ್ನು ರೈತ ಮಿತ್ರ ಯೋಜನೆಯಡಿ 2000-2001 ಸಾಲಿನಲ್ಲಿ ಸ್ಥಾಪಿಸಲಾಗಿದೆ. ಸದರಿ ವರ್ಷದಿಂದ ಸಸ್ಯ ಚಿಕಿತ್ಸಾಲಯ ಕಾರ್ಯಕ್ರಮವನ್ನು ರಾಜ್ಯ ವಲಯದಲ್ಲಿ ಪ್ರಾರಂಭಿಸಲಾಗಿದ್ದು 2005-06ನೇ ಸಾಲಿನಿಂದ ಸದರಿ ಕಾರ್ಯಕ್ರಮವನ್ನು ಜಿಲ್ಲಾ ವಲಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ರೈತ ಸಂಪರ್ಕ ಕೇಂದ್ರಗಳ ದೈನಂದಿನ ಕಾರ್ಯನಿರ್ವಹಣೆ ಮತ್ತು ಕಟ್ಟಡಗಳ ನಿರ್ವಹಣೆ ಸೇರಿದಂತೆ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮತ್ತು ಅಗತ್ಯ ಪ್ರಾತ್ಯಕ್ಷತೆಗಳನ್ನು ತೆಗೆದುಕೊಳ್ಳುವ ಕುರಿತ ವೆಚ್ಚ ಭರಿಸಲು ಈ ಯೋಜನೆಯಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

### ೧. ಪ್ರಾತ್ಯಕ್ಷಿಕೆಗಳು

ಸುಧಾರಿತ ಕೃಷಿ ತಂತ್ರಜ್ಞಾನ ವರ್ಗಾವಣೆಯಲ್ಲಿ ಪ್ರಾತ್ಯಕ್ಷಿಕೆಗಳ ಪಾತ್ರ ಮಹತ್ತರವಾಗಿದೆ. ಸಾರ್ವಜನಿಕ ಮತ್ತು ಖಾಸಗಿ ರಂಗಗಳ ತಂತ್ರಜ್ಞಾನ ಮತ್ತು ಪರಿಕರಗಳ ಬಳಕೆ ಕುರಿತ ತಾಂತ್ರಿಕತೆ ಕೌಶಲ್ಯಗಳನ್ನು ರೈತ ಸಂಪರ್ಕ ಕೇಂದ್ರದ ಜಮೀನಿನಲ್ಲಿ ಅಥವಾ ಈ ಉದ್ದೇಶಕ್ಕೆ ಭೂ ಬಾಡಿಗೆ ಇಲ್ಲದೆ ಪ್ರಾತ್ಯಕ್ಷಿಕೆಗಾಗಿ ಜಮೀನು ನೀಡಲು ಮುಂದಾಗುವ ರೈತರ ಜಮೀನಿನಲ್ಲಿ 10 ಗುಂಟೆ ಕ್ಷೇತ್ರದ 2 ಪ್ರಾತ್ಯಕ್ಷಿಕೆ ಏರ್ಪಡಿಸುವ ಮೂಲಕ ರೈತರಿಗೆ ಮನಗಾಣುವಂತೆ ಮಾಡಬೇಕು.

ಪ್ರತಿ ಪ್ರಾತ್ಯಕ್ಷಿಕೆಗೆ (10 ಗುಂಟೆ ಕ್ಷೇತ್ರ) ರೂ.500.00 ಹಂಚಿಕೆ ಇರುತ್ತದೆ. ಪ್ರಾತ್ಯಕ್ಷಿಕೆಗೆ ಬೇಕಾಗುವ ಪರಿಕರಗಳನ್ನು (package of practices ಪ್ರಕಾರ) ಖರೀದಿಸಲು ಈ ಅನುದಾನವನ್ನು ಉಪಯೋಗಿಸಬಹುದಾಗಿದೆ.

ಖಾಸಗಿಯವರ ತಂತ್ರಜ್ಞಾನ ಅಥವಾ ಪರಿಕರ ಪ್ರಾತ್ಯಕ್ಷಿಕೆಗೆ ಒಳಪಟ್ಟಲ್ಲಿ ಖಾಸಗಿಯವರೇ ವೆಚ್ಚ ಭರಿಸತಕ್ಕದ್ದು. ಇಂತಹ ಪ್ರಾತ್ಯಕ್ಷಿಕೆಗಳಿಗೆ ಇಲಾಖೆಯು ನೀಡಿರುವ ಅನುದಾನವನ್ನು ಉಪಯೋಗಿಸಕೂಡದು.

ಪ್ರಾತ್ಯಕ್ಷಿಕೆ ತಾಕಿನ ಬಿತ್ತನೆ ದಿನಾಂಕ, ಬೆಳೆಯ ವಿವಿಧ ಹಂತಗಳಲ್ಲಿ ಕಂಡು ಬಂದ ಅಂಶಗಳು(Observations), ಕಟಾವು ಮಾಡಿದ ದಿನಾಂಕ ಪಡೆಯಲಾದ ಇಳುವರಿ, ಪ್ರಾತ್ಯಕ್ಷಿಕೆಯ ಉದ್ದೇಶ ಸಾಧಿಸುವಲ್ಲಿ ಆದ ಪ್ರಗತಿ ಹಾಗೂ ನಿರೀಕ್ಷಿತ ಪ್ರಗತಿ ಸಾಧಸಲಾಗದಿದ್ದಲ್ಲಿ ಕಾರಣಗಳ ಸಮೇತ ವಿವರವಾದ ವರದಿಗಳನ್ನು ಯುಕ್ತ ಮಾರ್ಗದ ಮುಖಾಂತರ ಕಾಲಕಾಲಕ್ಕೆ ಕೇಂದ್ರ ಕಛೇರಿಗೆ ಕಳುಹಿಸಬೇಕು.

### ೨. ಕಟ್ಟಡ ವೆಚ್ಚಗಳು:

ಈ ಘಟಕದಡಿ ಒದಗಿಸಲಾದ ಅನುದಾನದಲ್ಲಿ ಖಾಸಗಿ ಕಟ್ಟಡಗಳಲ್ಲಿ ಇರುವ ರೈತ ಸಂಪರ್ಕ ಕೇಂದ್ರಗಳ ಬಾಡಿಗೆ ವೆಚ್ಚವನ್ನು ಮತ್ತು ಇಲಾಖಾ ಕಟ್ಟಡಗಳಲ್ಲಿರುವ ಕೇಂದ್ರಗಳಲ್ಲಿ ದುರಸ್ತಿ ಸೇರಿದಂತೆ ಪೂರಕ ಕಾಮಗಾರಿಗಳನ್ನು ಮತ್ತು ಕಟ್ಟಡಗಳ ನಿರ್ವಹಣಾ ವೆಚ್ಚಗಳನ್ನು ಭರಿಸುವುದು.

ಕೇಂದ್ರ ಕಛೇರಿಯ ಆದೇಶ ಸಂ.ರೈಸಂಕೇ : ತಾಂ-1 : 8 : 2008 ದಿನಾಂಕ 29-11-2008 ರಲ್ಲಿ ತಿಳಿಸಿರುವ ಪ್ರಕಾರ ರೈತ ಸಂಪರ್ಕ ಕೇಂದ್ರಗಳ ಬಾಡಿಗೆ ವೆಚ್ಚವನ್ನು ಪಾವತಿಸತಕ್ಕದ್ದು.

ಮುಖ್ಯವಾದ ಸೂಚನೆಃ ಬಾಡಿಗೆ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳ ಬಾಡಿಗೆ ದರವನ್ನು ಹೆಚ್ಚಿಸಲಾಗಿರುವುದರಿಂದ ಈ ಘಟಕದಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವು ಕೆಲವು ಜಿಲ್ಲೆಗಳಿಗೆ ಕಡಿಮೆಯಾಗಿರುವುದು ತಿಳಿದು ಬಂದಿದೆ. ಈ ಬಗ್ಗೆ ಸಂಬಂಧಪಟ್ಟ ಜಂಟಿ ಕೃಷಿ ನಿರ್ದೇಶಕರುಗಳು ಜಿಲ್ಲಾ ಪಂಚಾಯಿತಿ ವತಿಯಿಂದ ಸರ್ಕಾರಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿ ಅನುದಾನ ಬಿಡುಗಡೆ ಮಾಡಿಸಿಕೊಳ್ಳಲು ಸೂಚಿಸಿದೆ.

**೩.ನಿರ್ವಹಣಾ ವೆಚ್ಚಃ**

ಕೇಂದ್ರಗಳಲ್ಲಿ ಮಾಹಿತಿ ವಿಸ್ತರಣೆ ಹಾಗೂ ಪ್ರದರ್ಶನದೊಂದಿಗೆ ಅಚ್ಚುಕಟ್ಟುತನ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಪ್ರತಿ ಕೇಂದ್ರಕ್ಕೆ ನಿರ್ವಹಣಾ ವೆಚ್ಚ ಬಾಬ್ತು ಒದಗಿಸುವ ಅನುದಾನವನ್ನು ಸ್ವಚ್ಛತೆ ಮತ್ತು ನೀರಿನ ವ್ಯವಸ್ಥೆ, ನೀರಿನ ಶುಲ್ಕ, ವಿದ್ಯುತ್ ಶುಲ್ಕ, ಸಣ್ಣ ದುರಸ್ತಿ (ಇಲಾಖೆಯ ಕಟ್ಟಡಗಳಲ್ಲಿ ಮಾತ್ರ) ಸರ್ವೀಸ್ ಸ್ಟಾಂಪ್, ದೂರವಾಣಿ ವೆಚ್ಚ, ತಂತಿ ವೆಚ್ಚ, ವಿಸ್ತರಣಾ ಸಾಹಿತ್ಯ ಮುದ್ರಣ, ಜನಪ್ರಿಯ ಕನ್ನಡ ದಿನಪತ್ರಿಕೆ, ಕೃಷಿ ಪರಿಕರ(ಮಾದರಿ ಪ್ರದರ್ಶನಕ್ಕಾಗಿ) ಸಂದೇಶಗಳನ್ನು ಬರೆಯಲು ಪೆನ್ನು, ಬಳಪ, ಲೇಖನ ಸಾಮಗ್ರಿ, ಪ್ರದರ್ಶನ ಸಾಮಗ್ರಿ, ಕೌಶಲ್ಯ ಭೋಧನಾ ಸಾಮಗ್ರಿ ಹಾಗೂ ಕಟ್ಟಡ ಬಾಡಿಗೆ ಸೇರಿದಂತೆ ಇತರೆ ವೆಚ್ಚಗಳಿಗಾಗಿ ಉಪಯೋಗಿಸಬಹುದಾಗಿದೆ.

**ಸೂಚನೆಃ** ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳ ನಿರ್ವಹಣಾ ವೆಚ್ಚವನ್ನು ಕೃಷಿ ನಿರ್ದೇಶನಾಲಯ (ಯೋಜನೆ) ಯಲ್ಲಿ ಭರಿಸಲಾಗುತ್ತಿರುವುದರಿಂದ ಈ ಘಟಕದಡಿ ಒದಗಿಸಲಾದ ಅನುದಾನವನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳಿಗೆ ಲಭ್ಯವಿರುವುದಿಲ್ಲ.

**೪. ಯಂತ್ರ ಸಾಧನ ಸಾಮಗ್ರಿ :**

ಸಾಧನ ಸಾಮಗ್ರಿಗಳನ್ನು ಸ್ಥಳೀಯ ಬೇಡಿಕೆಗನುಗುಣವಾಗಿ ಖರೀದಿಸಬಹುದಾಗಿದ್ದು ಈ ಸಂಬಂಧ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರುಗಳು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರೊಡನೆ ಚರ್ಚಿಸಿ ಈ ಕಛೇರಿಯಿಂದ 22.5.03 ರಂದು ನೀಡಲಾದ ಪತ್ರ ಸಂಖ್ಯೆಃ ರೈಸಂಕೇಂ/ತಾಂ-1/59/ರೈರಾಯೋ/03 ರಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ರೈತ ಸಂಪರ್ಕ ಕೇಂದ್ರಗಳ ಪ್ರಗತಿಯ ವಿವರಗಳನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರು ಪ್ರತಿ ತಿಂಗಳು ದಿನಾಂಕ 10ರೊಳಗಾಗಿ ಕೇಂದ್ರ ಕಛೇರಿಗೆ ಕಳುಹಿಸಬೇಕು. ಎಲ್ಲಾ ರೈತ ಸಂಪರ್ಕ ಕೇಂದ್ರಗಳಿಂದ ಪ್ರಗತಿಯ ವಿವರಗಳನ್ನು ಪಡೆದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ದಿನಾಂಕ 5 ರೊಳಗಾಗಿ ಪ್ರತಿ ತಿಂಗಳೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರಿಗೆ ತಲುಪಿಸತಕ್ಕದ್ದು.

ಕೃಷಿ ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಗೆ ವಿಶೇಷ ಆರ್ಥಿಕ ಅಧಿಕಾರ ನೀಡುವ ಬಗ್ಗೆ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆಃಕೃತೋಇ/130/ಕೃಪ ಎ/98 ದಿನಾಂಕ 21-4-2001 ರ ಕ್ರ.ಸಂ.18 ರಲ್ಲಿ To sanction expenditure on holding farmers week, farmers days, field days on farms and institutionsಕ್ಕ ಬಾಬ್ತು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಅನುದಾನ ಲಭ್ಯತೆಯ ಮಿತಿಗೊಳಪಟ್ಟಂತೆ ವೆಚ್ಚ ಭರಿಸಲು ಪೂರ್ಣ ಅಧಿಕಾರ ನೀಡಲಾಗಿದೆ. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಈ ಅಧಿಕಾರವನ್ನು ಸಂಬಂಧಪಟ್ಟ ನಿಯಮಾನುಸಾರ ಚಲಾಯಿಸಿ ರೈತ ಸಂಪರ್ಕ ಕೇಂದ್ರಗಳನ್ನು ರೈತರ ಸಪ್ತಾಹ, ರೈತರ ದಿನ, ಹಾಗೂ ಕ್ಷೇತ್ರೋತ್ಸವಗಳನ್ನು ಏರ್ಪಡಿಸಲು ಸಜ್ಜುಗೊಳಿಸಬಹುದಾಗಿದೆ.

# ಉಪ ಕೃಷಿ ನಿರ್ದೇಶಕರು (ರೈತ ಸಂಪರ್ಕ ಕೇಂದ್ರ )

## ಲೆಕ್ಕ ಶೀರ್ಷಿಕೆಃ 2401-00-109-0-21 ( ಯೋಜನೆ)

## ಉಪಶೀರ್ಷಿಕೆ D 19 -ಕಟ್ಟಡ ವೆಚ್ಚ, ಪ್ರಾತ್ಯಕ್ಷಿಕೆಗಳು , ನಿರ್ವಹಣಾ ವೆಚ್ಚ ಮತ್ತು ಸಾಧನ ಸಾಮಗ್ರಿಗಳು

ಆರ್ಥಿಕ-ರೂ ಗಳಲ್ಲಿ

| ಕ್ರ ಸಂ | ಜಿಲ್ಲೆಯ ಹೆಸರು | ಒಟ್ಟು ರೈ. ಸಂ. ಕೇ | ಕಟ್ಟಡ ವೆಚ್ಚಗಳಿಗೆ ಬೇಕಾಗುವ ಅನುದಾನ | | ಪ್ರಾತ್ಯಕ್ಷಿಕೆಗಳು (ರೂ 1000 ಪ್ರತಿ ರೈ.ಸಂ.ಕೇ) | | ನಿರ್ವಹಣಾ ವೆಚ್ಚ | | ಯಂತ್ರ ಸಾಧನ ಸಾಮಗ್ರಿಗಳು | ಜಿಲ್ಲಾ ಒಟ್ಟು | ಷರಾ |
|---|---|---|---|---|---|---|---|---|---|---|---|
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | | | |
| 1 | ಬೆಂಗಳೂರು ( ನ) | 17 | 11 | 233000 | 34 | 17000 | 15 | 150000 | 0 | **400000** | |
| 2 | ಬೆಂಗಳೂರು ಗ್ರಾ | 17 | 12 | 226000 | 34 | 17000 | 14 | 120000 | 0 | **363000** | |
| 3 | ರಾಮನಗರ | 18 | 11 | 200000 | 36 | 18000 | 14 | 168000 | 18000 | **404000** | |
| 4 | ಕೋಲಾರ | 27 | 18 | 300000 | 54 | 27000 | 23 | 203000 | 0 | **530000** | |
| 5 | ಚಿಕ್ಕಬಳ್ಳಾಪುರ | 26 | 11 | 198000 | 52 | 26000 | 20 | 240000 | 16000 | **480000** | |
| 6 | ತುಮಕೂರು | 50 | 30 | 680000 | 100 | 50000 | 42 | 504000 | 20000 | **1254000** | |
| 7 | ಶಿವಮೊಗ್ಗ | 40 | 12 | 216000 | 80 | 40000 | 38 | 456000 | 20000 | **732000** | |
| 8 | ಚಿತ್ರದುರ್ಗ | 22 | 5 | 162000 | 44 | 22000 | 22 | 396000 | 30000 | **610000** | |
| 9 | ದಾವಣಗೆರೆ | 24 | 9 | 270000 | 48 | 24000 | 24 | 532000 | 24000 | **850000** | ರೂ 1.0 ಲಕ್ಷ * |
| 10 | ಮೈಸೂರು | 33 | 15 | 450000 | 66 | 33000 | 33 | 594000 | 33000 | **1110000** | |
| 11 | ಚಾಮರಾಜನಗರ | 16 | 8 | 170000 | 32 | 16000 | 16 | 156000 | 8000 | **350000** | |
| 12 | ಮಂಡ್ಯ | 31 | 18 | 552000 | 62 | 31000 | 31 | 558000 | 31000 | **1172000** | |
| 13 | ಕೊಡಗು | 16 | 6 | 73000 | 32 | 16000 | 16 | 50000 | 16000 | **155000** | |

| ಕ್ರ ಸಂ | ಜಿಲ್ಲೆಯ ಹೆಸರು | ಒಟ್ಟು ರೈ. ಸಂ. ಕೇ | ಕಟ್ಟಡ ವೆಚ್ಚಗಳಿಗೆ ಬೇಕಾಗುವ ಅನುದಾನ | | ಪ್ರಾತ್ಯಕ್ಷಿಕೆಗಳು (ರೂ 1000 ಪ್ರತಿ ರೈ.ಸಂ.ಕೇ) | | ನಿರ್ವಹಣಾ ವೆಚ್ಚ | | ಯಂತ್ರ ಸಾಧನ ಸಾಮಗ್ರಿಗಳು | ಜಿಲ್ಲಾ ಒಟ್ಟು | ಷರಾ |
|---|---|---|---|---|---|---|---|---|---|---|---|
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | | | |
| 14 | ಹಾಸನ | 38 | 26 | 343000 | 76 | 38000 | 38 | 204000 | 0 | **585000** | |
| 15 | ಚಿಕ್ಕಮಗಳೂರು | 32 | 24 | 768000 | 64 | 32000 | 32 | 576000 | 32000 | **1408000** | |
| 16 | ದಕ್ಷಿಣ ಕನ್ನಡ | 17 | 9 | 354000 | 34 | 17000 | 17 | 306000 | 17000 | **694000** | |
| 17 | ಉಡುಪಿ | 9 | 4 | 120000 | 18 | 9000 | 9 | 108000 | 9000 | **246000** | |
| 18 | ಧಾರವಾಡ | 14 | 9 | 414000 | 28 | 14000 | 14 | 252000 | 14000 | **694000** | |
| 19 | ಗದಗ | 11 | 5 | 186000 | 22 | 11000 | 11 | 198000 | 11000 | **406000** | |
| 20 | ಹಾವೇರಿ | 19 | 9 | 280000 | 38 | 19000 | 18 | 270000 | 19000 | **588000** | |
| 21 | ಉತ್ತರ ಕನ್ನಡ | 35 | 16 | 492000 | 70 | 35000 | 35 | 630000 | 35000 | **1192000** | |
| 22 | ಬೆಳಗಾಂ | 35 | 25 | 802000 | 70 | 35000 | 30 | 504000 | 35000 | **1376000** | |
| 23 | ರಾಯಚೂರು | 18 | 10 | 402000 | 36 | 18000 | 18 | 324000 | 18000 | **762000** | |
| 24 | ಕೊಪ್ಪಳ | 18 | 12 | 402000 | 36 | 18000 | 18 | 407000 | 25000 | **852000** | ರೂ 0.83 ಲಕ್ಷ * |
| 25 | ಬಳ್ಳಾರಿ | 37 | 13 | 492000 | 74 | 37000 | 37 | 666000 | 37000 | **1232000** | |
| 26 | ಗುಲ್ಬರ್ಗಾ | 20 | 13 | 900000 | 40 | 20000 | 20 | 156000 | 17000 | **1093000** | |
| 27 | ಬಿಜಾಪುರ | 27 | 14 | 294000 | 54 | 27000 | 27 | 486000 | 27000 | **834000** | |
| 28 | ಬಾಗಲಕೋಟೆ | 48 | 30 | 408000 | 96 | 48000 | 48 | 864000 | 48000 | **1368000** | |
| 29 | ಬೀದರ್ | 30 | 17 | 517000 | 60 | 30000 | 30 | 540000 | 30000 | **1117000** | |
| **ಒಟ್ಟು** | | **745** | **402** | **10904000** | **1490** | **745000** | **710** | **10618000** | **590000** | **22857000** | |

* ಬಿಡುಗಡೆಯಾದ ಅನುದಾನವನ್ನು ಸ್ವಂತ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳ ದುರಸ್ತಿ ವೆಚ್ಚಗಳಿಗೆ ಮಾತ್ರ ಉಪಯೋಗಿಸತಕ್ಕದ್ದು.

ಸೂಚನೆಃ ಲೆಕ್ಕ ಶೀರ್ಷಿಕೆ ೨೪೦೧-೦೦-೧೦೯-೦-೨೧ ಅಡಿಯಲ್ಲಿ ಎರಡು ಕಾರ್ಯಕ್ರಮಗಳಿಗೆ (ಅಂದರೆ ಸಸ್ಯ ಚಿಕಿತ್ಸಾಲಯಗಳು ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು) ಅನುದಾನವನ್ನು ಬಿಡುಗಡೆ ಮಾಡುವುದರಿಂದ ಜಿಲ್ಲಾ ಪಂಚಾಯಿತಿಯಿಂದ ಅನುದಾನ ಬಿಡುಗಡೆ ನಂತರ ಜಿಲ್ಲಾವಾರು / ಕಾರ್ಯಕ್ರಮವಾರು ಅನುದಾನ ಹಂಚಿಕೆಯನ್ನು ಗಮನಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ. ಈ ಕುರಿತು ಅಗತ್ಯಾನುಸಾರ ಅನುಮೋದಿತ ಘಟಕಗಳಿಗೆ ಜಿಲ್ಲೆಯ ಒಟ್ಟಾರೆ ಅನುದಾನಾವಕಾಶ ಗಮನಿಸಿ ವೆಚ್ಚ ಭರಿಸುವುದು.